ದಿನಾಂಕ **05-10-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.
ಮುಂದುವರೆದ ಪಾಟಿ ಸವಾಲು ಃ ಶ್ರೀ ಡಿ ಪಿ ಟಿ ವಾದಿ ಪರ ವಕೀಲರಿಂದ -

ದಾವಾಸ್ತಿಗಳು ಸರ್ವೆ ನಂ. 475 ಮತ್ತು 374 ಇವು ಶೆಟ್ಟೆಪ್ಪ ಮತ್ತು ನಮ್ಮ ಮಾವ ಬಾಳಪ್ಪನ ಹೆಸರಿನಲ್ಲಿ ದಾಖಲ ಇದ್ದವು ಎಂದರೆ ಸರಿ . ದಿನಾಂಕ 12-12-1969 ರಲ್ಲಿ ತನ್ನ ಸಹೋದರ ಬಾಳಪ್ಪ ಇವರ ಹೆಸರನ್ನು ½ ಅಂಶಕ್ಕೆ ದಾಖಲ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯದಲ್ಲಿ ಹಾಜರ ಪಡಿಸಿದ ದಾಖಲೆಯನ್ನು ನೋಡಿರುತ್ತೇನೆ. ವಾದಿ ಬಸವ್ವ ಇವರು ನ್ಯಾಯಾಲಯದಲ್ಲಿ ಹಾಜರ ಪಡಿಸಿದ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ಸ್ರದಿ ದಾಖಲೆಗಳನ್ನು ನೋಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ದಾವಾ ಆಸ್ತಿಗಳಿಗೆ ಶೆಟ್ಟೆಪ್ಪ ಮತ್ತು ಬಾಳಪ್ಪನ ಹೆಸರು ದಾಖಲ ಆದ ಬಗ್ಗೆ ಡೈರಿ ನಂ. 2052 ರ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಮಾವ ಬಾಳಪ್ಪ ಶೆಟ್ಟೆಪ್ಪ 1981 ರಲ್ಲಿ ತೀರಿಕೊಂಡ ಬಳಿಕ ತಾನೇ ವಾರಸುದಾರ ಎಂದು ಹೆಸರು ದಾಖಲಿಸಲು ತಹಶೀಲ್ದಾರ ಇವರಿಗೆ ಅರ್ಜಿ ಸಲ್ಲಿಸಿಲದ್ದರು ಎಂದರೆ ನನಗೆ ಗೊತ್ತಿಲ್ಲ. ಸ್ರದಿ ಅರ್ಜಿಗೆ ತಂಗೆವ್ವ ಇವರು ಒಪ್ಪಿಗೆ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ವಾದಿಯು ತಕರಾರು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಡೈರಿ ನಂ.3907 ನ್ನು ಬಾಳಪ್ಪ ಈತನು ಏಸಿ ಬೆಳಗಾವಿ ಇವರ ನ್ಯಾಯಾಲಯದಲ್ಲಿ ಆರ್ ಟಿ ಎಸ್ ನಂ. 38/2000 ರಂತೆ ಅಪೀಲು ಸಲ್ಲಸಿ ಡೈರಿ ನಂ.3907 ನ್ನು ದಾಖಲಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಕಂದಾಯ ಅಧಿಕಾರಿಗಳನ್ನು ಬಾಳಪ್ಪ ಈತನು ಅನುಕೂಲ ಮಾಡಿಕೊಂಡು ಮಂಜೂರು ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

2003 ನೇ ಸಾಲಿನಲ್ಲಿ ಬಾಳಪ್ಪ ಈತನು ನನ್ನ ಹೆಸರಿಗೆ ದಾವಾಸ್ತಿ ರಿ . ಸ ನಂ. 475 ಕ್ಕೆ ಸಂಬಂಧಿಸಿದಂತೆ ಹಕ್ಕುಬಿಟ್ಟ ಪತ್ರ ಬರೆದುಕೊಟ್ಟಿರುತ್ತಾನೆ ಎಂದರೆ ಸರಿ . ಸ್ರದಿ ಹಕ್ಕುಬಿಟ್ಟ ಪತ್ರಕ್ಕೆ ತಹಶೀಲ್ದಾರ ಇವರ ಮುಂದೆ ವಾದಿ ಬಸವ್ವ ಮತ್ತು ನ್ಯಾಮವ್ವ ಇವರು ತಕರಾರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ . ಸಾಕ್ಷಿ ಮುಂದುವರೆದು ಆದರೆ ಅವರು ಬಂದು ಹಾಜರ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಅವರು ತಕರಾರು ಅರ್ಜಿ ಸಲ್ಲಿಸಿದ್ದರಿಂದ ನಮ್ಮ ಅರ್ಜಿಯನ್ನು ರದ್ದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಬಾಳಪ್ಪ ಈತನು ಏಸಿ ಬೆಳಗಾವಿ ನ್ಯಾಯಾಲಯದಲ್ಲಿ ಆರ್ ಟಿ ಎಸ್ ನಂ. 46/2002-03 ರಂತೆ ಅಪೀಲು ಸಲ್ಲಿಸಿ ಅವರಂತೆ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಂದಾಯ ಅಧಿಕಾರಿಗಳನ್ನು ಅನುಕೂಲ

ಮಾಡಿಕೊಂಡು ನಮ್ಮಂತೆ ಮಂಜೂರು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ವಾದಿ ಗೆ ಆಸ್ತಿಯಲ್ಲಿ ಅವರ ತಂದೆ ಪಾಲು ಕೊಡಬಾರದು ಎಂದು ದಾವಾ ಜಮೀನುಗಳಲ್ಲಿ ನಮ್ಮ ಹೆಸರನ್ನು ದಾಖಲ ಮಾಡಡಿರುತ್ತೇನೆ ಎಂದರೆ ಸರಿಯಲ್ಲ.

ಶೆಟ್ಟೆಪ್ಪ ತೀರಿಕೊಂಡ ನಂತರ ತಹಶೀಲ್ದಾರ ಹುಕ್ಕೇರಿ ಇವರು ವಾರಸಾಪ್ರಮಾಣ ಪತ್ರ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶೆಟ್ಟೆಪ್ಪನ ಮಕ್ಕಳು ಎಂದು ಶಿವನವ್ವ , ಬಸವ್ವ ,ತುಳಸವ್ವ ಎಂದು ನಿ.ಪಿ-8 ರಂತೆ ವಾರಸಾ ಪ್ರಮಾಣ ಪತ್ರ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾರಸಾ ಪ್ರಮಾಣ ಪತ್ರ ತಪ್ಪು ಇದೆ ನಾನು ಪ್ರಶ್ನೆ ಮಾಡಿರುತ್ತೇನೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರ ಪಡಿಸಿರುತ್ತೇನೆ. ಶೆಟ್ಟೆಪ್ಪನಿಗೆ ಬಾಳಪ್ಪನೇ ವಾರಸುದಾರ ಎಂದು ವಾರಸಾ ಪ್ರಮಾಣ ಪತ್ರ ಪಡೆದಿರುವುದಿಲ್ಲ.

ವಾದಿ ಬಸವ್ವ ಈಗ ಗುಡಸದಲ್ಲಿ ವಾಸವಾಗಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ನಾವು ಗುಡಸ ಊರು ಬಿಟ್ಟು ಹೊಲದಲ್ಲಿ ವಾಸವಾಗಿರುತ್ತೇವೆ. ಇಲ್ಲಿಯವರೆಗೆ ಬಸವ್ವ, ನ್ಯಾಮವ್ವ ಮತ್ತು ತುಳಸವ್ವ ಇವರ ತಂದೆ ತಾಯಿ ಯಾರು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ವಾದಿ ಮತ್ತು ನಮಗೆ ಯಾವುದೇ ಸಂಬಂಧ ಇರುವುದಿಲ್ಲ .ಆದಕಾರಣ ವಿಚಾರಣೆ ಮಾಡಿರುವುದಿಲ್ಲ.

1995 ರಲ್ಲಿ ಬಾಳಪ್ಪನ ಹೆಸರು ದಾವಾಸ್ತಿಯಲ್ಲಿ ದಾಖಲ ಮಾಡಿಕೊಂಡ ನಂತರ ಈ ಎಲ್ಲ ಕೇಸುಗಳು ದಾಖಲ ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಶೆಟ್ಟೆಪ್ಪ ಈತನು ಬಾಳಪ್ಪನ ಹೆಸರಿಗೆ ಹಕ್ಕುಬಿಟ್ಟ ಪತ್ರವಾಗಲೀ ಮತ್ತು ಭಕ್ಷೀಸು ಪತ್ರವಾಗಲೀ ದಾವಾಸ್ತಿಗೆ ಸಂಬಂಧಿಸಿದಂತೆ ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ.

ನನ್ನ ಗಂಡ ಗೂಳಪ್ಪ ಕಡೆಯಿಂದ ನಾನು ಕೇಸು ನಡೆಸಲು ಪಾವರ ಆಫ್ ಅಟೋರ್ನಿ ಬರೆಸಿಕೊಂಡಿರುತ್ತೇನೆ. ನನ್ನ ಗಂಡ ಈಗಲೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಆರಾಮವಾಗಿದ್ದಾರೆ ಎಂದರೆ ಸರಿಯಲ್ಲ. ಅವರು ಅನಾರೋಗ್ಯದಿಂದ ಇದ್ದಾರೆ ಎಂದು ತೋರಿಸಲು ದಾಖಲೆ ಹಾಜರ ಪಡಿಸುತ್ತೇನೆ. ನನ್ನ ಗಂಡ ಗೂಳಪ್ಪ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ನಿಜಾಂಶ ಹೊರಗೆ ಬರುತ್ತದೆ ಎಂದು ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ತಾಯಿ ಕೆಂಪವ್ವ ಮತ್ತು ತಂದೆ ಸಾತಪ್ಪ ಇವರ ಮಗಳು ಎಂದು ತೋರಿಸಲು ನಾನು ಶಾಲಾ ದಾಖಲೆ ಹಾಜರ ಪಡಿಸಿರುತ್ತೇನೆ. ಕೆಂಪವ್ವ ತಳವಾರ ಮತ್ತು ಲಕ್ಷ್ಮಿಬಾಯಿ ಬೈರಪ್ಪಕಾಂಬಳೆ ಇವರ ನಡುವೆ ದಾವಾಸ್ತಿ ರಿ . ಸ. ನಂ. 475 ಮತ್ತು 374 ಕ್ಕೆ ಸಂಬಂಧಿಸಿದಂತೆ ಆರ್ ಟಿ ಎಸ್ ಹಿಸ್ಸಾ ನಂ. 181/2021-22 ರಂತೆ ಪ್ರಕರಣ ತಹಶೀಲ್ದಾರ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದರೆ ಸರಿ . ದಾವಾ ಜಮೀನುಗಳು ಮರಡಿ ಜಮಿನುಗಳು ಇವೆ ಎಂದರೆ ಸರಿಯಲ್ಲ. ನಿ.ಪಿ-39 ಮತ್ತು 40 ರ ಪಹಣಿ ಪತ್ರಿಕೆಗಳಲ್ಲಿ ಮರಡಿ ಎಂದು ನಮೂದು ಇದೆ ಎಂದರೆ ಸರಿ . 2018 ರಲ್ಲಿ ಮರಡಿ ಜಮೀನಿನ ಬೆಲೆ ಪ್ರತಿ ಎಕರೆಗೆ ರೂ. 2,10,000-00 ಬೆಲೆ ಇತ್ತು ಎಂದರೆ ಸರಿ . ಅದೇ ರೀತಿ 2015-16 ರಲ್ಲಿ ಮರಡಿ ಜಮೀನಿನ ಬೆಲೆ ಪ್ರತಿ ಎಕರೆಗೆ ರೂ. 1,40,000-00 ಬೆಲೆ ಇತ್ತು ಎಂದರೆ ಸರಿಯಲ್ಲ. ಜಮೀನಿನ ಬೆಲೆ ಪ್ರತಿ ವರ್ಷ ಹೆಚ್ಚಾಗುತ್ತದೆ ಎಂದರೆ ಸರಿ . ವಾದಿಯರು ತಮ್ಮ ತಂದೆಯ ಹಿಸ್ಸೆಯ ಜಮೀನನ್ನು ಕಬ್ಜಾ ವೈವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಗಳ ಕಬ್ಜಾ ವೈವಾಟನ್ನು ನಾವೇ ಮಾಡುತ್ತಿದ್ದೇವೆ. ವಾದಿಯರಿಗೆ ನಾವು ಧಮಕಿ ಹಾಕಿ ಕಬ್ಜಾ ವೈವಾಟು ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ದಾವಾ ಜಮೀನುಗಳಲ್ಲಿ ಪ್ರತಿ ಎಕರೆಗೆ 50 ಟನ್ನು ಕಬ್ಬು ಬೆಳೆಯುತ್ತೇವೆ ಎಂದರೆ ಸರಿ . ಪ್ರತಿ ವರ್ಷ 2-3 ಲಕ್ಷ ರೂ. ಲಾಭ ಆಗುತ್ತದೆ ಎಂದರೆ ಸರಿ . ವಾದಿಗೆ ಅವರ ತಂದೆ ಪಾಲು ಕೊಡಬಾರದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಿಖಿತ ಹೇಳಿಕೆಯ ಪ್ಯಾರಾ ನಂ. 10 ರಲ್ಲಿ ಮೂಲ ಪುರುಷ ಗೂಳಪ್ಪನ 1 ನೇ ಮಗನಾದ ಶೆಟ್ಟೆಪ್ಪ ಮತ್ತು ಶಿವಲಿಂಗವ್ವ ಇವರ ದಾಂಪತ್ಯ ಜೀವನದಿಂದಯಾವುದೇ ಸಂತತಿ ಆಗಿರುವುದಿಲ್ಲ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ಯಾರಾ ನಂ. 13 ರಲ್ಲಿ ಶೆಟ್ಟೆಪ್ಪ ಈತನಿಗೆ ಬಾಳಪ್ಪನು ವಾರಸುದಾರ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಯಾವುದೆ ಪಾಲು ಕೊಡಬಾರದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ